ಗಾಯತ್ರಿ, ರಾಜಾಜಿನಗರ
ಕ್ಲಾಸ್‌ಮೇಟ್‌ಗೂ, ಗ್ಲಾಸ್‌ಮೇಟ್‌ಗೂ ಇರುವ ವ್ಯತ್ಯಾಸವೇನು ಗುರುಗಳೆ...?



ಕ್ಲಾಸ್‌ಮೇಟ್ ತರಗತಿಯಲ್ಲಿ ಸಿಗುತ್ತಾನೆ, ಗ್ಲಾಸ್‌ಮೇಟ್ ತರ ತರದ ಗತಿಗಳಲ್ಲಿ ಸಿಗುತ್ತಾನೆ!

ರಮೇಶ ಜ. ಬೊಂಗಾಳೆ, ಬೈಲಹೊಂಗಲ
*ಭೂತ, ಭವಿಷ್ಯತ್, ವರ್ತಮಾನ ತಿಳಿದ ಮನುಷ್ಯ ಈಗ ಇದ್ದಿದ್ದರೆ ಏನಾಗುತ್ತಿತ್ತು ಸಾರ್?*
ಅವನಿಗೆ ಎಲ್ಲಾ ಟಿವಿ ಚಾನಲ್‌ಗಳಲ್ಲೂ ಬ್ರಹ್ಮಾಂಡದಂತಹ ಬೇಡಿಕೆ ಇರುತ್ತಿತ್ತು.

ಮಲ್ಲಿಕಾರ್ಜುನ ಹ. ಬಗಲಿ, ಸಾಂಗ್ಲಿ
*ಹೊಟ್ಟೆ ತುಂಬಿದ ಬಳಿಕವೂ ತಿನ್ನ ಬಹುದಾದದ್ದು ಏನಿರಬಹುದು ಸಾರ್?*
ಅಜೀರ್ಣದ ಮಾತ್ರೆ!

ಡಿ.ಕೆ. ರಾಜ್, ಗದಗ
*ಈ ಹೃದಯ ಮಾರಾಟಕ್ಕೆ ಇದೆ ಎಂದು ಬೋರ್ಡ್ ಹಾಕಲೆ?*




ನಿಮ್ಮದೇ? ಎರಡು ಕಿಡ್ನಿ ಕೊಂಡರೆ ಒಂದು ಹೃದಯ ಫ್ರೀ ಎಂದರೆ ಮಾತ್ರ ಜನ ತೆಗೆದುಕೊಳ್ಳುವರಂತೆ!

ಆರ್. ಮಧುಸೂದನ್, ಹಾಸನ
*ಹಣ ಕೊಟ್ಟು ಖರೀದಿಸಿದ ನಾಯಿಯನ್ನು ಪ್ರೀತಿಯಿಂದ ಕಾಣುವ ಮಗ ತಂದೆ ತಾಯಿಯರನ್ನು ವೃದ್ಧಾಶ್ರಮದಲ್ಲಿ ಇಡುವುದೇಕೆ?*
ಇವರೂ ಅವನು ಹಾಕಿದ್ದನ್ನು ತಿಂದು ಬಾಲ ಅಲ್ಲಾಡಿಸಿಕೊಂಡಿದ್ದರೆ ಮನೆಯಲ್ಲೇ ಇಟ್ಟುಕೊಳ್ಳುತ್ತಾನಂತೆ!

ಎನ್.ಆರ್. ದೇಸಾಯಿ, ರಾಯಚೂರು
*ಜೈಲಿನ ಖೈದಿಗಳಿಗೆ ಚುನಾವಣೆಯಲ್ಲಿ ಮತದಾನ ಮಾಡಲು ಹಕ್ಕು ಇರುತ್ತದೆಯೆ?*
ಕಳ್ಳರು ಓಟ್ ಹಾಕುವಂತಿಲ್ಲ, ಆದರೆ ಕಳ್ಳಓಟ್ ಹಾಕಬಹುದು!

ಎಸ್. ಶ್ರೀಧರ್, ಬೆಂಗಳೂರು
*ಚುನಾವಣಾ ಸಮಯದಲ್ಲಿ ನಾನಿರುವುದೆ ನಿನಗಾಗಿ ಎನ್ನುತ್ತಾ, ಗೆದ್ದನಂತರ ಯಾರು ಯಾರು ನೀ ಯಾರು ಎಂದು ಹಾಡುವವನು ಆಡಳಿತ ನಡೆಸುವಾಗ ಹಾಡುವ ಹಾಡು ಯಾವುದು?*
ನಾನೇ ಮಂತ್ರಿಕುಮಾರ, ಕನ್ನಡತಾಯಿಯ ದ್ವೇಷಿಪ ಕುವರ, ಅನೀತಿ ಉಳಿಸಿ, ನ್ಯಾಯ ಅಳಿಸಿ, ಶಾಂತಿಯ ಕೆಡಿಸಲು ಬಂದಿಹ ಚೋರ......

ಪೇಂಟರ್ ಪಾಪು, ಸಂತೇಮರಹಳ್ಳಿ
*ಗುಲಾಬಿ ಗಿಡದಲ್ಲಿ ಮುಳ್ಳು, ದಾಸವಾಳದ ಗಿಡದಲ್ಲಿ ಮುಳ್ಳಿಲ್ಲ. ಆದರೂ ಗುಲಾಬಿಗೇ ಹೆಚ್ಚು ಮಹತ್ವವೇಕೆ?*
ಹುಚ್ಚಪ್ಪ; ದಾಸವಾಳ ಶಿವನ ತಲೆ ಏರುತ್ತದೆ, ಗುಲಾಬಿ ಕೇವಲ ಮನುಜಪ್ರೀಮಿತ. ಗುಲಾಬಿಗೆ ಇರುವುದು ಕೇವಲ ದರ, ದಾಸವಾಳಕ್ಕೆ ಆದರ!

ಪಿ.ಜೆ. ರಾಘವೇಂದ್ರ, ಮೈಸೂರು
*ವಿಕ್ರಮಾದಿತ್ಯನ ಸ್ಥಾನದಲ್ಲಿ ಅಕ್ರಮಾದಿತ್ಯರು ಆಸೀನರಾದರೆ ಸಮಾಜದ ಗತಿಯೇನು ರಾಮ್?*
ನಮ್ಮ ಸಮಾಜಕ್ಕೆ ಅದರ ಕಾವೂ ತಟ್ಟದು ಬಿಡಿ; ಪಾಪ, ಅದು ಯಾವಾಗಲೋ ಕೋಮಾ ತಲುಪಿಬಿಟ್ಟಿದೆ!

ಎಸ್.ಎ. ಮೋಹನರಾಜು, ಶಿವಮೊಗ್ಗ
*ಸರಳಜೀವನ ವಿರಳವಾಗುತ್ತಿರುವುದಕ್ಕೆ ಕಾರಣವೇನು?*
ಸರಳುಗಳ ಹಿಂದೆ ಹೋಗಲು ಲಾಯಖ್ಖಾದ ಜೀವನ ನಡೆಸುತ್ತಿರುವುದು!

ಟಿ.ಆರ್. ರವೀಂದ್ರ, ಬೆಂಗಳೂರು
*ಪ್ರೀತಿಯ ಸಂಕೇತವಾಗಿ ಹೃದಯದ ಬದಲು ಬೇರೆ ಅಂಗವನ್ನೇಕೆ ಬಳಸಬಾರದು?*
ಬೇರೆ ಯಾವುದೇ ಅಂಗದಲ್ಲೂ ಸ್ವಂತವಾಗಿ ಮಿಡಿತ, ಸ್ಪಂದನ ಉಂಟಾಗದ್ದರಿಂದ!

ಗೀತಾ ಬರ್ಲ, ಬೆಂಗಳೂರು
*ಮನೆಗೆ ಕರೆಯದೆ ಬರುವ ಅತಿಥಿ ಯಾರು?*
ಧೂಳು.

## ಬಹುಮಾನಿತ ಪ್ರಶ್ನೆ

ಎಂ.ಎಸ್. ಸೋಮಶೇಖರ್, ಮೈಸೂರು
*ಕೋಳಿಮೊಟ್ಟೆಗೂ, ತೆಂಗಿನಕಾಯಿಗೂ ಇರುವ ವ್ಯತ್ಯಾಸವೇನು?*
ಕೋಳಿಮೊಟ್ಟೆಯನ್ನು ನೆಲದಲ್ಲಿ ಹೂತರೆ ಕೋಳಿಗಳನ್ನು ಬಿಡುವ ಗಿಡ ಹುಟ್ಟುವುದಿಲ್ಲ.

ಕಲಾವಿದ ಸೀನು, ಚಿತ್ರದುರ್ಗ
*ವ್ಯಕ್ತಿ ಬದುಕಿದ್ದಾಗ ಸಾಧನೆ ಗುರುತಿಸದೆ ನಿಧನದ ನಂತರ ಮರಣೋತ್ತರ ಪ್ರಶಸ್ತಿ ನೀಡುವುದು ಸಮಂಜಸವೆ?*
ಪ್ರಪಂಚ ನಿಯಮ ಸಾರ್; ಜಿಂಕೆಚರ್ಮಕ್ಕೆ ಇರುವ ಬೆಲೆ ಜಿಂಕೆಗೆ ಇಲ್ಲ!

ಮಲ್ಲಿಕಾರ್ಜುನ ಗಚ್ಚಿ, ಗೋಗಿ
*ಸತ್ಯಕ್ಕೆ ತಣ್ಣೀರೆರಚಿದ ನಿತ್ಯಾನಂದಸ್ವಾಮಿಗೂ, ಸತ್ಯವನ್ನೇ ಹೇಳುವೆನೆಂದು ಪ್ರಮಾಣವಚನ ಸ್ವೀಕರಿಸುವ ಜನಪ್ರತಿನಿಧಿಗೂ ಇರುವ ಸಾಮ್ಯವೇನು?*
ಎಮ್ಮೆ ಎಮ್ಮೆಯೇ; ಅದು ಮಂಚದ ಕೊಚ್ಚೆಯಲ್ಲಿ ಹೊರಳಾಡಿತು, ಇದು ಲಂಚದ ಕೊಚ್ಚೆಯಲ್ಲಿ ಹೊರಳಾಡುತ್ತದೆ!

ಶಿವರಾಜ ಕೆ. ವಿಭೂತಿ, ಹರಿಹರ
*ಗಂಡ ಉದ್ದ, ಹೆಂಡತಿ ಕುಳ್ಳಿ. ಅವರಲ್ಲಿ ಸಮರಸದ ಬದುಕು ಬರಲು ಸಾಧ್ಯವೆ?*



ಸಮರಸಕ್ಕೆ ಬೇಕಾದ್ದು ಸೆಂಟಿಮೀಟರ್ ಅಲ್ಲ ಸಾರ್, ಸೆಂಟಿಮೆಂಟ್ಸ್!

ಬೋ.ಪಾ. ವೆಂಕಟೇಶ್, ಬೋಧನಹೊಸಹಳ್ಳಿ
*ಇತ್ತೀಚಿನ ಸಿನಿಮಾಗಳ ಹಾದಿ ಹೇಗಿದೆ?*
ಆಹಾ! ಅವುಗಳ ಸಂಭಾಷಣೆ, ದೃಶ್ಯಗಳಿಗೆ ಹೋಲಿಸಿದರೆ ಪ್ಲೇಬಾಯ್, ಪೆಂಟ್‌ಹೌಸ್‌ಗಳು ಧರ್ಮಗ್ರಂಥಗಳು ಎನಿಸುತ್ತವೆ!

ಅಮರಯ್ಯ ಪತ್ರಿಮಠ, ಶೇರಾಪೂರ
*ನಿರಾಶೆಯಲ್ಲೂ ಆಶೆಯನ್ನು ಮೂಡಿಸುವುದು ಯಾವುದು?*
ಆ್ಯಂಟಿಸಿಪೇಟರಿ ಬೇಲ್!

■ ರಾಮ್